

# ತಪ್ಪಲು ಬಾರದ ಹಾದಿ

ಹಾರರ್ ಅಂಶ ಬಿಟ್ಟುಕೊಡದೇ ಅದಕ್ಕೆ ಅತೀತವಾದ ಧ್ವನಿಶಕ್ತಿಯನ್ನೂ ಗಳಿಸಿಕೊಂಡಿರುವ ಕಿರುಚಿತ್ರವಿದು.

■ ಗೌರಿ

ಫ್ರೆಂಚ್–ಅಮೆರಿಕನ್ ನಟಿ, ಆಸ್ಕರ್ ಪ್ರಶಸ್ತಿ ಪಡೆದ ಡೇನಿಯಲ್ ಚಾಜೆಲ್ಲೆಯ ಸಹೋದರಿ ಅನ್ನಾ ಚಾಜೆಲ್ಲೆಯ ನಿರ್ದೇಶನದ ಮೊದಲ ಕಿರುಚಿತ್ರ 'ನ್ಯಾರೋ'. ಯಾವುದೋ ಒಂದು ಪ್ರಕಾರದಲ್ಲಿ ಇಡಬೇಕು ಎಂದರೆ ಇದೊಂದು ಹಾರರ್ ಸಿನಿಮಾ. ಗೋಡೆಯೇರುವ ತೇವದ ಹಾಗೆ ಮೆಲ್ಲ ಮೆಲ್ಲನೇ ಏರುತ್ತ ಕೊನೆಗೆ ಗೋಡೆಯನ್ನೇ ಕೆಡಹುವ ಹಾಗೆಯೇ ಈ ಕಿರುಚಿತ್ರದಲ್ಲಿನ ಹಾರರ್ ಅಂಶವು ನಮ್ಮನ್ನು ವ್ಯಾಪಿಸುತ್ತದೆ. ನಿರೂಪಣೆಯಲ್ಲಿನ ಬಿಗಿತನ, ತಾಂತ್ರಿಕ ಗಟ್ಟಿತನ, ನಟನೆಯ ಪ್ರತಿಭೆ ಎಲ್ಲವೂ ಈ ಕಿರುಚಿತ್ರದಲ್ಲಿ ಸೇರಿ ನಟಿಯಾಗಿ ಪ್ರಸಿದ್ಧರಾಗಿದ್ದ ಅನ್ನಾ ಒಳಗೆ ಪ್ರತಿಭಾವಂತ ನಿರ್ದೇಶಕಿಯೂ ಇದ್ದಾಳೆ ಎಂಬುದನ್ನು ಸಾಬೀತುಮಾಡುತ್ತದೆ.

ಈ ಚಿತ್ರದ ಮುಖ್ಯ ಪಾತ್ರದಲ್ಲಿ ಅನ್ನಾ ಚಾಜೆಲ್ಲೆಯೇ ನಟಿಸಿದ್ದಾರೆ.

ಮರುಭೂಮಿಯಂಥ ಬಟಾಬಯಲಿನಲ್ಲಿ ಸ್ಲೋಯಾನ್ ನಡೆದುಹೋಗುತ್ತಿದ್ದಾಳೆ. ನೆತ್ತಿಮೇಲೆ ಸುಡುವ ಬಿಸಿಲಿದೆ. ತುಸು ದೂರದಲ್ಲಿ ಹೆಣ್ಣೊಬ್ಬಳು ಕೂತು ರೋದಿಸುತ್ತಿದ್ದಾಳೆ. 'ನನಗೆ ಸಹಾಯ ಮಾಡು' ಎಂದು ಬಗೆಬಗೆಯಾಗಿ ಅರಚಿಕೊಳ್ಳುತ್ತ ಅಂಗಲಾಚುತ್ತಿದ್ದಾಳೆ. ಕ್ಷಣ ನಿಂತು ನೋಡುವ ಸ್ಲೋಯಾನ್ ಮತ್ತೆ ಮುಖ ತಿರುವಿ ಮುಂದೆ ನಡೆಯುತ್ತಾಳೆ. ಸಹಾಯಕ್ಕಾಗಿ ಅಂಗಲಾಚುತ್ತಿದ್ದವಳ ಆಕ್ರಂದನ ಹಿಂದೆಯೇ ಕರಗಿಹೋಗುತ್ತದೆ. ಅವಳು ನಡೆಯುತ್ತಿರುವುದು ಬೂದು ಬಣ್ಣದ ಪುಡಿಯ ಮೇಲೆ. ದಾರಿಯ ಗುರ್ತಿನ ಹಾಗೆ ಉದ್ದೋ ಉದ್ದಕ್ಕೆ ಎರಡು ಹೆಜ್ಜೆಗಳನ್ನು ಇಡುವಷ್ಟೇ ಅಗಲಕ್ಕೆ ಪುಡಿಯನ್ನು ಚೆಲ್ಲಿ ದಾರಿಗುರ್ತು ಮಾಡಲಾಗಿದೆ.

ಆ ಹುಡಿಯನ್ನು ಮೆಟ್ಟಿಕೊಂಡು ಇರುವಷ್ಟು ಹೊತ್ತು ಅವಳಿಗೆ ಅಲ್ಲಿನ ಯಾವ ಶಕ್ತಿಗಳೂ ಏನೂ ಮಾಡಲಾರವು ಎಂಬ ಸಂಗತಿಯೊಂದನ್ನು ಹೇಳದೆಯೇ ನಿರ್ದೇಶಕಿ ಪ್ರೇಕ್ಷಕನ ಮನಸಲ್ಲಿ ಕೂರಿಸುತ್ತಾಳೆ. ಅವಳಿಗೆ ಸಿಗುವ ಪಾತ್ರಗಳೆಲ್ಲವೂ ಅವಳನ್ನು ಆ ದಾರಿಯಿಂದ ಹೊರಗಡಿಯಿಡುವಂತೆ ಪ್ರೇರೇಪಿಸುತ್ತವೆ. ಮತ್ತು ಹಾಗೆ ಸಿಗುವ ಪಾತ್ರಗಳೆಲ್ಲವೂ ಅವಳ ಭೂತದ ಬದುಕಿನಿಂದಲೇ ಎದ್ದು ಬಂದವು ಎಂಬುದಕ್ಕೂ ಸೂಚನೆಗಳಿವೆ. ಕೊನೆಯಲ್ಲಿ ಅವಳಿಗೆ ಎದುರಾಗುವ ಹುಡುಗ ಅವಳ ಗೆಳೆಯನಾಗಿದ್ದ ಎಂಬುದನ್ನು ಅವನ ಮಾತಿನಿಂದ ನಾವೇ ಗ್ರಹಿಸಿಕೊಳ್ಳಬೇಕು. ಅವನು ಅವಳನ್ನು 'ನನ್ನ ಜೊತೆ ಬಾ' ಎಂದು ಕರೆಯುತ್ತಾನೆ. ಸನಿಹ ನಿಂತುಕೊಂಡು ಕೈ ಚಾಚುತ್ತಾನೆ. ಆ ಪ್ರೀತಿಯಿಂದ ತಪ್ಪಿಸಿಕೊಳ್ಳಲಾಗದೆ ಸ್ಲೋಯಾನ್ ಬೂದು ಬಣ್ಣದ ಹುಡಿ ಬಿಟ್ಟು ಹೊರಗಿನ ಬಯಲಿಗೆ ಕಾಲಿಡುತ್ತಾಳೆ. ಅಲ್ಲಿಗೆ ಅವಳ ಮೇಲೆ ಯಾವುದೋ ಅಜ್ಞಾತ ಶಕ್ತಿ ಆಕ್ರಮಣ ಮಾಡಿ ಮುಗಿಸುತ್ತದೆ.

ಒಂದು ದೃಷ್ಟಿಯಲ್ಲಿ ಹಿಂದುಮುಂದಿಲ್ಲದೆ ಬರೀ ಹಾರರ್ ಅಂಶವನ್ನಷ್ಟೇ ಉದ್ದೀಪಿಸುವ ಸಲುವಾಗಿ ಮಾಡಿದ ಕಿರುಚಿತ್ರದಂತೆ ಕಾಣಿಸುವ ನ್ಯಾರೋ, ಮರುಕ್ಷಣದಲ್ಲಿ ಬೇರೆಯೇ ಅರ್ಥದಲ್ಲಿ ಹೊಳೆಯಲಾರಂಭಿಸುತ್ತದೆ. ಕಥಾನಾಯಕಿ ಸ್ಲೋಯಾನ್ ನಡೆಯುತ್ತಿರುವುದು ನಮ್ಮೆಲ್ಲರ ಬದುಕಿನ ದಾರಿಯೂ ಅಲ್ಲವೇ? ಭೂತದಿಂದ ತಪ್ಪಿಸಿಕೊಂಡು ಬದುಕಿನ ದಾರಿಯಲ್ಲಿ ಮುನ್ನಡೆಯುವುದು ಎಷ್ಟು ಕಷ್ಟವಲ್ಲವೇ? ಕಳೆದುಹೋದ ಬದುಕಿನ ಸಂಬಂಧಗಳು, ವ್ಯಕ್ತಿಗಳೆಲ್ಲವೂ ನಮ್ಮ ಮನಸೊಳಗೆ ಬಗೆಬಗೆಯಾಗಿ ಕಾಡುತ್ತ, ಪೀಡಿಸುತ್ತ, ನಮ್ಮೊಳಗಿನ ಎಲ್ಲವನ್ನೂ ನಿಯಂತ್ರಿಸುತ್ತ ತಮ್ಮ ತೆಕ್ಕೆಯಲ್ಲಿ ನಮ್ಮನ್ನೂ ಹುದುಗಿಸಲು ಹವಣಿಸುತ್ತಲೇ ಇರುತ್ತಾರಲ್ಲವೇ? ಕ್ಷಣ ಯಾಮಾರಿದರೂ ನಮ್ಮ ಭೂತದಲ್ಲಿ ನಾವೇ ಮುಳುಗಿ ನಾಶವಾಗಿ ಹೋಗುತ್ತೇವಲ್ಲವೇ? ಹೀಗೆ ನೋಡಿದರೆ ಈ ಇಡೀ ಕಿರುಚಿತ್ರ ಹೊರಗಿನ ಜಗತ್ತಿನದ್ದು ಅಲ್ಲವೇ ಅಲ್ಲ, ಪೂರ್ತಿಯಾಗಿ ನಮ್ಮೊಳಗಿನ ಜಗತ್ತನ್ನೇ ತೋರಿಸುತ್ತಿದೆ ಎನಿಸುತ್ತದೆ. ಹೀಗೆ ಒಂದು ಹಾರರ್ ಕಥೆಗೆ ಅದರ ಮೂಲಭೂತ ಗುಣವನ್ನು ಮರೆಮಾಚದೆ ಮತ್ತೊಂದು ಧ್ವನಿಪೂರ್ಣ ಆಯಾಮವನ್ನೂ ಕೊಡುವುದು ಪ್ರತಿಭಾವಂತ ನಿರ್ದೇಶಕ/ಕಿಗೆ ಮಾತ್ರ ಸಾಧ್ಯ. ಆ ದೃಷ್ಟಿಯಿಂದಲೇ ಈ ಕಿರುಚಿತ್ರ ಗಮನಾರ್ಹವಾದ ಪ್ರಯತ್ನವಾಗಿದೆ.



ಹೆಸರು: ನ್ಯಾರೋ
ನಿರ್ದೇಶನ/ನಿರ್ಮಾಣ: ಅನ್ನಾ ಚಾಜೆಲ್ಲೆ
ಛಾಯಾಗ್ರಹಣ: ಮ್ಯಾಥ್ಯೂ ಫಾಲ್ಯಾಕ್ಸೋ
ಸಂಕಲನ: ಮೋರ್ಗನ್ ಹಾಲ್ಸೆ
ತಾರಾಗಣ: ಅನ್ನಾ ಜಾಜೆಲ್ಲೆ, ಶೆಯಾನ್ ಇಬ್ರಾಹಿಂ, ಮ್ಯಾಥ್ಯೂ ಗೆಲೆನ್‌ಸ್ಟೇನ್

ಈ ಕಿರುಚಿತ್ರ ವೀಕ್ಷಣೆಗೆ https://bit.ly/3DkxRKZ ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.